ಅಧ್ಯಕ್ಷರು : 10 ಜನ ಮಾನ್ಯ ಸದಸ್ಯರು ನೋಟೀಸ್ ಕಳುಹಿಸಿದ್ದರು. ಅದನ್ನು ಮಧ್ಯಾಹ್ನ ಡ್ರಾ ಮಾಡಿದಾಗ 5 ಹೆಸರು ಪಟ್ಟಿಯಲ್ಲಿ ಏನು ನಮೂದಾಗಿದೆ ಈ ಐದು ಹೆಸರುಗಳು ಬಂತು.

ಶ್ರೀ ಆರ್.ವಿ. ದೇಶಪಾಂಡೆ : ಹತ್ತು ಜನ ಯಾರು ಹೇಳಿ. ಏಕೆಂದರೆ ನಾನೂ ಸಹಿ ಹಾಕಿದ್ದೆ.

ಅಧ್ಯಕ್ಷರು : ಶ್ರೀ ರಾಜುಗೌಡ, ಶ್ರೀ ಪಿ.ಜಿ. ಆರ್. ಸಿಂಧ್ಯಾ, ಶ್ರೀ ವಾಟಾಳ್ ನಾಗರಾಜ್, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಕೆ. ಲಕ್ಷ್ಮಪ್ಪ, ಶ್ರೀ ಆರ್.ವಿ. ದೇಶಪಾಂಡೆ, ಶ್ರೀ ಡಿ.ಬಿ. ಚಂದ್ರೇಗೌಡ; ಶ್ರೀ ಸಿ. ಬೈರೇಗೌಡ, ಶ್ರೀ ಜೀವರಾಜ್ ಆಳ್ವ ಮತ್ತು ಪ್ರೊ: ಎಂ.ಡಿ. ನಂಜುಂಡಸ್ವಾಮಿ-ಈ ಹತ್ತು ಮಾನ್ಯ ಸದಸ್ಯರುಗಳು.

ಶ್ರೀ ಎಂ. ವೀರಪ್ಪ ಮೊಯಿಲಿ (ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ವಿಧಾನ ಪರಿಷತ್ತಿನಲ್ಲಿ ಅವರ ಪ್ರಶ್ನೆ ಇರುವುದರಿಂದ ಅಲ್ಲಿದ್ದಾರೆ. ಅರ್ಧ ಗಂಟೆಯಲ್ಲಿ ಬರುತ್ತಾರೆ. ಆದ್ದರಿಂದ ಆಮೇಲೆ ತೆಗೆದುಕೊಳ್ಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಬಂದಮೇಲೆ ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು : ಅವರು ಬಂದಮೇಲೆ ನೋಡೋಣ.

ನಿಯಮ 334ರ ಮೇಲೆ ಚರ್ಚೆ

(1) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡುವುದು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಯೋಜನೆಯನ್ನು ಕಾರ್ಯಗತಗೊಳಿಸಲು ಹಲವಾರು ರೈತರ ಬೇಸಾಯದ ಗದ್ದೆಗಳು ಮತ್ತು ತೆಂಗು ಮುಂತಾದ ಫಲಭರಿತ ತೋಟಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು ಈ ಭೂಮಿಯನ್ನು ಕಳೆದುಕೊಂಡ ಸಂತ್ರಸ್ಥರಿಗೆ ಪರಿಹಾರಧನವನ್ನು ಸರಿಯಾಗಿ ಪಾವತಿಸದೇ ಇರುವುದು ಹಾಗೂ ಭೂಮಿಯ ಬೆಲೆಗಳನ್ನು ಸರಿಯಾದ ಧಾರಣೆಗೆ ನಿಗದಿಪಡಿಸದೇ 5000 ರೂಪಾಯಿ ಬೆಲೆ ಬಾಳುವ ಭೂಮಿಗೆ ಕೇವಲ 500 ರೂಪಾಯಿ ನಿಗದಿಪಡಿಸಿರುವುದು, 100 ತೆಂಗಿನಕಾಯಿ ಬೆಳೆಯುವ ಮರಕ್ಕೆ 4000ರಿಂದ 5000 ರೂಪಾಯಿ ತನಕ ತೋಟಗಾರಿಕೆ ಇಲಾಖೆಯವರು ಬೆಲೆ ಕಟ್ಟಿದರೂ ಕಂದಾಯ ಇಲಾಖೆಯವರು ಕೇವಲ 300ರಿಂದ 400 ರೂಪಾಯಿತನಕ ಬೆಲೆ ಕಟ್ಟುತ್ತಿರುವುದಾಗಿ ವದಂತಿಗಳು ಕೇಳಿ ಬರುತ್ತಿದೆ. ಮತ್ತು ಇರುವ ಭೂಮಿಯನ್ನು ಪೂರ್ತಿ ಕಳೆದುಕೊಂಡ ಸಂತ್ರಸ್ಥರಿಗೆ ಬದಲಿ ಭೂಮಿಯ ವ್ಯವಸ್ಥೆ ಮಾಡದೇ ಇರುವುದು ಈ ರೀತಿ ಅವರಿಗೆ ಬೇರೆ ಮನೆ ಕೆಲಸ ಪೂರ್ತಿಯಾಗುವ ತನಕ ಅವಕಾಶ ಕೊಡದಿರುವುದು ಮುಂತಾದ ಈ ಸಮಸ್ಯೆಗಳ ಗೊಂದಲಮಯದೊಳಗೆ ಪರಿಹಾರದ ದಾರಿ ಕಾಯುತ್ತಿದ್ದಾರೆ.

ಆದ್ದರಿಂದ ಈ ಬಗ್ಗೆ ತುರ್ತು ಗಮನ ಹರಿಸಿ ಇವರ ಭೂಮಿಗಳಿಗೆ ಮಾರುಕಟ್ಟೆ ಬೆಲೆಯ ಧಾರಣೆ ನಿಗದಿ ಪಡಿಸುವುದು, ಪರಿಹಾರವನ್ನು ಅತೀ ಶೀಘ್ರದಲ್ಲಿ ಪಾವತಿಸುವುದು, ಇರುವ ಪೂರ್ತಿ ಭೂಮಿ ಕಳೆದುಕೊಂಡವರಿಗೆ ಬದಲಿ ಭೂಮಿಯ ವ್ಯವಸ್ಥೆ ಮಾಡಿ ಮನೆಕೆಲಸ ಪೂರ್ತಿಯಾಗುವ ತನಕ ಅವಕಾಶ ನೀಡುವುದು ಇವೇ ಮುಂತಾದವುಗಳ

ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸರಕಾರವನ್ನು ಈ ಸದನದ ಮೂಲಕ ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಕಂದಾಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ....

ಕೊಂಕಣ ರೈಲ್ವೆ ಯೋಜನೆಯು ಪ್ರಾರಂಭದಲ್ಲಿ ಮಂಗಳೂರು ತಾಲ್ಲೂಕಿನ 13 ಗ್ರಾಮಗಳನ್ನು ಮತ್ತು ಉಡುಪಿ ತಾಲ್ಲೂಕಿನ 17 ಗ್ರಾಮಗಳನ್ನು ಒಳಗೊಂಡಿರುತ್ತದೆ. ಈ ಉದ್ದೇಶಕ್ಕಾಗಿ ಮಂಗಳೂರು ತಾಲ್ಲೂಕಿನ 220 ಎಕರೆ ಮತ್ತು 27 ಸೆಂಟ್ಸ್ ಮತ್ತು ಉಡುಪಿ ತಾಲ್ಲೂಕಿನ 343 ಎಕರೆ 98 ಸೆಂಟ್ಸ್ ಕ್ಷೇತ್ರ ಭೂಸ್ವಾಧೀನಕ್ಕೆ ಒಳಪಟ್ಟದ್ದಾಗಿದೆ. ಭೂಸ್ವಾಧೀನ ಕಾಯಿದೆ ಕಲಂ 17ರನ್ವಯ ತುರ್ತು ನಿಯಮದಡಿಯಲ್ಲಿ ಭೂಸ್ವಾಧೀನ ಮಾಡಲಾಯಿತು. ಸರ್ಕಾರವು ಭೂಮಿಯನ್ನು ಕಳೆದುಕೊಂಡ 1800 ಜನರಿಗೆ ಯುಂಗಡ ಪರಿಹಾರ ಧನ 110.00 ಲಕ್ಷ ರೂಪಾಯಿಗಳನ್ನು ನೀಡಲಾಯಿತು. (ಇದರಲ್ಲಿ 23.63 ಲಕ್ಷ ಅಭಿವೃದ್ಧಿಗಾಗಿ ಸೇರಿದೆ) ಇದನ್ನು ಸರ್ಕಾರದ ಸ್ಪಷ್ಟ ನಿರ್ದೇಶನದಂತೆ ಜಿಲ್ಲಾಧಿಕಾರಿಗಳು ವಿತರಣೆ ಮಾಡಿರುತ್ತಾರೆ.

ಮುಂಗಡ ಪರಿಹಾರ ಧನವನ್ನು ನೀಡಿರುವುದು ಭೂಸ್ವಾಧೀನ ಕಾಯಿದೆಗೆ ಅನುಗುಣವಾಗಿರುತ್ತದೆ. ಉಳಿದ ಪರಿಹಾರ ಧನವನ್ನು ನೀಡಿರುವುದು ಭೂಸ್ವಾಧೀನ ಕಾಯಿದೆಗೆ ಅನುಗುಣವಾಗಿರುತ್ತದೆ. ಉಳಿದ ಪರಿಹಾರ ಧನವನ್ನು ಭೂಸ್ವಾಧೀನ ಕಾಯಿದೆಯ ಚೌಕಟ್ಟಿನಲ್ಲಿ ಅಂತಿಮ ತೀರ್ಪನ್ನು ಮಾಡಿದ ನಂತರ ಪಾವತಿ ಮಾಡಾಲಾಗುವುದು.

ಹೀಗಿರುವಾಗ ಭೂಸ್ವಾಧೀನಕ್ಕೆ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಈಗಾಗಲೇ ಪಾವತಿ ಮಾಡಿದ ಮುಂಗಡ ಹಣವು ಕಡಿಮೆಯಾಗಿದೆಯೆಂದು ಹೇಳುವುದು ಸರಿಯಲ್ಲ. ಕಾರಣ ಇನ್ನೂ ಐತೀರ್ಪುಗಳು ಅಂತಿಮವಾಗಿ ಆಗಿಲ್ಲ. ಒಟ್ಟು ವಿತರಣೆ ಮಾಡಿದ ಹಣವು 214.43 ಲಕ್ಷ ಇದರಲ್ಲಿ 128 ಲಕ್ಷ ರೂಪಾಯಿಗಳು ಅಭಿವೃದ್ಧಿ ಕಾರ್ಯಗಳಿಗಾಗಿ ಇರುತ್ತವೆ.

ಈವರೆಗೆ ಮುಂಗಡವಾಗಿ ವಿತರಣೆ ಆದ ಹಣವು ಒಟ್ಟು ಐತೀರ್ಪಿನ ಅಂದಾಜು ಮೊತ್ತದ ಶೇಕಡ 80ರಷ್ಟು ಇದ್ದು ಇದು ಪೂರ್ಣ ಐತೀರ್ಪಿನ ಮೊತ್ತವಲ್ಲ. ಅಲ್ಲದೆ ಮಾಲ್ಕಿ ಬೆಲೆಯು ಸಂಬಂಧಪಟ್ಟ ಅಧಿಕಾರಿಗಳು ನಿಗಧಿಮಾಡಿದಂತಿದೆ. ಯಾವ ಬದಲಾವಣೆಯನ್ನೂ ಮಾಡಿಲ್ಲ. ಭೂಸ್ವಾಧೀನ ಕಾಯಿದೆ. ಪರಿಮಿತಿಯಲ್ಲಿ ಮತ್ತು ಮಾರ್ಗದರ್ಶನಗಳ ಆಧಾರದ ಮೇಲೆಯೇ ಅಂತಿಮ ಐತೀರ್ಪನ್ನು ನಿರ್ಣಯಿಸಲಾಗುವುದು. ಸರ್ಕಾರದ ಗಮನಕ್ಕೆ ಬಂದ ಪ್ರಕಾರ ಪ್ರತಿ ಎಕರೆ ಜಮೀನಿಗೆ 30,000ರೂಪಾಯಿಗಳಿಂದ 1 ಲಕ್ಷದವರೆಗೆ ಐತೀರ್ಪು ಆಗಬಹುದೆಂದು ತಿಳಿದು ಬರುತ್ತದೆ.

ಈ ಭೂಸ್ವಾಧೀನದಿಂದ ಜಮೀನು ಕಳೆದುಕೊಂಡವರಿಗೆ ನ್ಯಾಯಸಮ್ಮತವಾದ ಪರಿಹಾರ ನೀಡುವುದರ ಜೊತೆಗೆ ಅವರ ಪುನರ್ ವಸತಿಗಾಗಿಯೂ ಸರ್ಕಾರದ ಸಾಧ್ಯವಿದ್ದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

(2) ಶೃಂಗೇರಿ, ಕೊಪ್ಪ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಕೆ.ಎಸ್.ಎಫ್.ಸಿ.ಯಿಂದ ಒದಗಿಸುವ ಆರ್ಥಿಕ ಸೌಲಭ್ಯ.

ಶ್ರೀ ಯು.ಕೆ. ಶಾಮಣ್ಣ : ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲಾ ಶೃಂಗೇರಿ, ಕೊಪ್ಪ, ಎನ್.ಆರ್.ಪುರ ತಾಲ್ಲೂಕುಗಳಿಗೆ ಕೆಎಸ್ಎಫ್ಸಿ ಸಂಸ್ಥೆಯಿಂದ ಎಷ್ಟು ಜನರಿಗೆ ಆರ್ಥಿಕ ಸೌಲತ್ತುಗಳನ್ನು ಕೊಟ್ಟಿರುವಿರಿ ಎಂಬುದನ್ನು ತಿಳಿಸಿ. ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಗತಿಯಲ್ಲಿ ನಮ್ಮ ಜಿಲ್ಲೆ ಯಾವ ಮಟ್ಟದಲ್ಲಿದೆ? ಒಟ್ಟು